**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.**

**ಸಿ.ಸಿ. 228/2020**

| | | |
|---|---|---|
| ಸಾಕ್ಷಿಯ ಹೆಸರುಃ | ಕುಮಾರ ಬಿ ಎಸ್ | ಫ್ರಾಸಾಃಃ 1 |
| ತಂದೆ ಹೆಸರುಃ | ಸಣ್ಣದೇವಯ್ಯ | ಚಾಸಾಃಃ 1 |
| ವಯಸ್ಸುಃ | 50 ವರ್ಷ | ಪ್ರಮಾಣೀಕರಿಸಿದ<br>ದಿಃ 17/07/2023 |
| ಉದ್ಯೋಗಃ | ಮುಖ್ಯೋಪಧ್ಯಾಯರು | |
| ವಾಸಸ್ಥಳಃ | ಬಳ್ಳೂರು ಗ್ರಾಮ, ಕೆ.ಆರ್.ನಗರ ತಾಲ್ಲೂಕು. | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರಿಂದಃ**

ನಾನು 23/06/2010 ರಿಂದ 22/09/2022 ರವರೆಗೆ ವಡ್ಡರ ಬೈಲಕುಪ್ಪೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಭಾರ ಮುಖ್ಯೋಪಧ್ಯಾಯರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈಗ ನಾನು ಬಡ್ತಿ ಹೊಂದಿ ಮುಖ್ಯ ಶಿಕ್ಷಕನಾಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಚಿಕ್ಕನೇರಳೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿಃ 07/09/2019 ರಂದು ಶನಿವಾರ ವಾದ್ದರಿಂದ ನಾವು ಅರ್ಧ ದಿನದ ಶಾಲೆಯನ್ನು ಮುಗಿಸಿಕೊಂಡು, ಶಾಲೆಗೆ ಬೀಗ ಹಾಕಿ ಹೋಗಿದ್ದೆವು. ದಿಃ 09/09/2019 ರಂದು ಬೆಳಿಗ್ಗೆ 9.00 ಗಂಟೆಗೆ ಶಾಲೆಗೆ ಕರ್ತವ್ಯಕ್ಕೆ ಹಾಜರಾದೆವು. ನಾನು ಹೋಗಿ ನೋಡಿದಾಗ ಶಾಲಾ ಕಚೇರಿ, ಅಡುಗೆ ಮನೆ ಮತ್ತು ಬೀರುವಿನ ಬೀಗಗಳನ್ನು ಹೊಡೆದು ಹಾಕಿದ್ದರು. ಕಚೇರಿಯಲ್ಲಿ ಕಡತಗಳೆಲ್ಲಾ ಚೆಲ್ಲಾಪಿಲ್ಲಿಯಾಗಿದ್ದವು. ಚಾಸಾ-2 ಮತ್ತು 3 ರವರು ಆ ವೇಳೆ ನನ್ನ ಜೊತೆ ಇದ್ದರು. 2 ಗ್ಯಾಸ್ ಸಿಲಿಂಡರ್, 50 ಕೆಜಿ ತೂಕದ

ಒಂದು ಮೂಟೆ ಅಕ್ಕಿ, 1 ಕೆಜಿ ತೂಕದ 5 ಹಾಲಿನ ಪುಡಿಯ ಪ್ಯಾಕೇಟುಗಳು ಕಳುವಾಗಿದ್ದವು. ತಕ್ಷಣ ನಾನು ಬೆಟ್ಟದಪುರ ಪೊಲೀಸ್ ಠಾಣೆಗೆ ಹೋಗಿ ಸದರಿ ವಿಚಾರವಾಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು.

3. ಅದೇ ದಿನ ಮಧ್ಯಾಹ್ನ ಸುಮಾರು 1.00 ರಿಂದ 2.00 ಗಂಟೆ ಸಮಯದಲ್ಲಿ ಪೊಲೀಸರು ಸ್ಥಳಕ್ಕೆ ಬಂದರು. ನಾನು ಅವರಿಗೆ ಸ್ಥಳ ತೋರಿಸಿಕೊಟ್ಟ ಮೇರೆಗೆ ಮಹಜರ್ ಕ್ರಮ ಜರುಗಿಸಿ, ಬೀಗವನ್ನು ಅಮಾನತ್ತು ಪಡಿಸಿಕೊಂಡರು. ಸಾಕ್ಷಿಯು ಮಹಜರ್‌ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿ.ಪಿ.2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿ.ಪಿ.2(ಎ)** ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ.

4. ಆ ದಿನ ಪೊಲೀಸರು ಅಮಾನತ್ತು ಪಡಿಸಿಕೊಂಡ ಬೀಗವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬೀಗವನ್ನು ಒಂದು ಬಳಿ ಬಟ್ಟೆಯಲ್ಲಿ ಸುತ್ತಿದ್ದು, ಅದನ್ನು ತೆರೆದು ನೋಡಲಾಗಿ ಅದರಲ್ಲಿರುವ ಬೀಗವನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಬೀಗವನ್ನು **ಮು.ಮಾ.1** ಎಂದು ಗುರುತಿಸಲಾಯಿತು. ಕಳುವಾದ ಗ್ಯಾಸ್ ಸಿಲಿಂಡರ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಅವು ಈ ದಿನ ನ್ಯಾಯಾಲಯದ ಮುಂದಿದೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅವುಗಳನ್ನು **ಮು.ಮಾ.2** ಮತ್ತು **3** ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ಠಾಣೆಗೆ ಕರೆಸಿ ಆರೋಪಿತನ್ನು ತೋರಿಸಿರುತ್ತಾರೆ. ಅವರು ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ.

**(ಈ ಸಮಯದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಕಡತವನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ</u>**

5. ದಿನಾಂಕಃ 10/09/2019 ರಂದು ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿದರು ಎಂದರೆ ಸರಿ.

**<u>ಪಾಟೀ ಸವಾಲುಃ</u>** <u>ಆರೋಪಿತರ</u> **<u>ಪರ ಶ್ರೀ ಹೆಚ್.ಕೆ.ಎಸ್. ವಕೀಲರಿಂದಃ</u>**

6. ಪ್ರತಿ ತಿಂಗಳು ನಮಗೆ ಬರುವ ಸರಕಿನ ದಾಸ್ತಾನಿನ ಬಗ್ಗೆ ಲೆಕ್ಕ ಇಟ್ಟಿರುತ್ತೇವೆ. ಘಟನೆ ಕಾಲಕ್ಕೆ ಎಷ್ಟು ಸರಕು ಬಂದಿತ್ತು ಮತ್ತು ಎಷ್ಟು ಸಿಲಿಂಡರ್ ಗಳು ಬಂದಿದ್ದವು ಎಂದು ಈಗ ನೆನಪಿಲ್ಲ. ನಾನು ದಿಃ23/06/2010 ರಂದು ಮೇಲ್ಕಂಡ ಶಾಲೆಯ ಮುಖ್ಯೋಪಾಧ್ಯಾಯನಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ನಾನು 2010 ರಿಂದ 2022 ರ ವರೆಗೆ ಸದರಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ07/07/2019 ರಂದು ನಾನು ಬೆಳಿಗ್ಗೆ 11.30 ಗಂಟೆಗೆ ಶಾಲೆಯನ್ನು ಬಿಟ್ಟಿರುತ್ತೇನೆ. ನಮ್ಮ ಇಲಾಖಾ ನಿಯಮಾನುಸಾರ ಶನಿವಾರದಂದು ಬೆಳಿಗ್ಗೆ 7.55 ಗಂಟೆಯಿಂದ 11.20 ಗಂಟೆಯ ವರೆಗೆ ಶಾಲೆ ಇರುತ್ತದೆ. ನಾವು ಆ ದಿನ ಬೆಳಿಗ್ಗೆ ಮಕ್ಕಳಿಗೆ ಬೆಳಗಿನ ಉಪಹಾರ ಮಾಡಿಸಿರುತ್ತೇವೆ. ಆ ದಿನ ಶಾಲೆ ಬಿಡುವ ಕಾಲಕ್ಕೆ ಉಳಿಕೆ ದಾಸ್ತಾನಿನ ಬಗ್ಗೆ ನಮೂದಿಸಿರುತ್ತೇನೆ. ಆ ದಿನ ಉಳಿಕೆ ದಾಸ್ತಾನು ಎಷ್ಟು ಇತ್ತು ಎಂದು ಈಗ ನೆನಪಿಲ್ಲ. ನಾನು ಆ ದಿನ ಬೆಳಿಗ್ಗೆ 11.30 ಕ್ಕೆ ಹೋಗಿರುತ್ತೇನೆ, ಬೇರೆ ಶಿಕ್ಷಕರು 11.20 ಕ್ಕೆ ಹೊರಟಿರುತ್ತಾರೆ. ಶಾಲಾ ನಿರ್ವಹಣೆ ಮತ್ತು ಅನ್ನ ದಾಸೋಹ ನನ್ನ ಮೇಲ್ವಿಚಾರಣೆಯಲ್ಲಿರುತ್ತದೆ. ತಿಂಗಳಿನ ಕೊನೆಯ ದಿವಸ ದಾಸ್ತಾನಿನ ವರದಿಯನ್ನು ನೀಡುತ್ತೇನೆ. ನಾನೇ ಸ್ವತಃ ಶಾಲೆ ಮತ್ತು ದಾಸೋಹದ ಕೊಠಡಿಯ ಬೀಗವನ್ನು ಹಾಕಿಕೊಂಡು ಹೋಗಿರುತ್ತೇನೆ. ದಾಸ್ತಾನುಗಳು ಎಷ್ಟಿವೆ ಎಂದು ನೋಡಿಕೊಂಡು ಹೋಗಿರುತ್ತೇನೆ. ನಾನು ಬೀಗದ ಕೀಗಳನ್ನು ಯಾರಿಗೂ ಕೊಡುವುದಿಲ್ಲ. ದಿಃ 09/09/2019 ರಂದು ನಾನು, ಚಾಸಾ-2 ಮತ್ತು 3 ರವರು ಬೆಳಿಗ್ಗೆ 9.00 ಗಂಟೆಗೆ ಶಾಲೆಗೆ ಹೋಗಿರುತ್ತೇವೆ. ಆ ದಿನ ಶಾಲೆಯ ಕಾಂಪೌಂಡ್ ಬೀಗ ಸಹ ತೆರೆದಿತ್ತು. ನಾನೇ

ಮೊದಲಿಗೆ ಶಾಲೆಯ ಒಳಗೆ ಹೋಗಿರುತ್ತೇನೆ. ಶಾಲೆಯ ಕೊಠಡಿಗೆ ಹೋಗಿರುತ್ತೇನೆ ನಂತರ ಅನ್ನ ದಾಸೋಹದ ಕೊಠಡಿಗೆ ಹೋಗಿರುತ್ತೇನೆ. ನಾನು ಹೋಗುವಷ್ಟರಲ್ಲಿ ಶಾಲೆಯ ಕೊಠಡಿ ಮತ್ತು ಅನ್ನ ದಾಸೋಹದ ಕೊಠಡಿಗಳು ತೆರೆದಿತ್ತು. ಆ ಶಾಲೆಯಲ್ಲಿ 2 ಶಾಲಾ ಕೊಠಡಿ ಮತ್ತು ಒಂದು ಅನ್ನ ದಾಸೋಹ ಕೊಠಡಿ ಇದೆ. ಶಾಲೆಯ ಕಚೇರಿಯ ಬೀಗವನ್ನು ಹೊಡೆದು ಹಾಕಿದ್ದರು, ಕಚೇರಿಯಲ್ಲಿ ಏನೂ ಕಳುವಾಗಿರಲಿಲ್ಲ, ಅದರೆ ಅನ್ನ ದಾಸೋಹ ಕೊಠಡಿಯಲ್ಲಿ 2 ಗ್ಯಾಸ್ ಸಿಲಿಂಡರ್, 50 ಕೆಜಿ ತೂಕದ ಒಂದು ಮೂಟೆ ಅಕ್ಕಿ, 1 ಕೆಜಿ ತೂಕದ 5 ಹಾಲಿನ ಪುಡಿಯ ಪ್ಯಾಕೇಟುಗಳು ಕಳುವಾಗಿದ್ದವು. 2 ಸಿಲಿಂಡರ್ ಗಳು ತುಂಬಿದ್ದವು. ನಮ ಇಲಾಖೆಯ ಮುಖ್ಯಸ್ಥರಿಗೆ ಬೆಳಿಗ್ಗೆ 9.30 ಗಂಟೆ ಸಮಯದಲ್ಲಿ ದೂರವಾಣಿ ಮುಖಾಂತರ ಕಳುವಾದ ವಿಚಾರವನ್ನು ತಿಳಿಸಿರುತ್ತೇನೆ. ಅವರು ನನಗೆ ಅವರು ದೂರನ್ನು ನೀಡಲು ಸಲಹೆ ನೀಡಿದರು. ಆದರೆ ಲಿಖಿತವಾಗಿ ಸಲಹೆ ಕೊಟ್ಟಿಲ್ಲ. ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ. ನಾನು ಗಾಬರಿಗೊಂಡಿದ್ದರಿಂದ ಎಸ್.ಡಿ.ಎಂ.ಸಿ ಸಮಿತಿಗೆ ಈ ವಿಚಾರವನ್ನು ತಿಳಿಸಿಲ್ಲ. ನಾನು ಪೊಲೀಸ್ ಠಾಣೆಗೆ ಸುಮಾರು ಬೆಳಿಗ್ಗೆ 9.30-10.00 ಗಂಟೆ ಸಮಯಕ್ಕೆ ಹೋಗಿರುತ್ತೇನೆ. ನಾನು ನನ್ನ ದೂರಿನಲ್ಲಿ ಆರೋಪಿಯ ಬಗ್ಗೆ ತಿಳಿಸಿಲ್ಲ. ಕಳ್ಳತವನ್ನು ಮಾಡಿರುವ ಬಗ್ಗೆ ಯಾರೂ ಖುದ್ದಾಗಿ ನೋಡಿರುವುದಿಲ್ಲ. ದೂರನ್ನು ಕೊಟ್ಟ ನಂತರ ಬೆಳಿಗ್ಗೆ 11.30 ಗಂಟೆ ಸಮಯಕ್ಕೆ ವಾಪಸ್ಸು ಶಾಲೆಗೆ ಬಂದಿರುತ್ತೇನೆ. ನಾನು ದೂರನ್ನು ಕೊಟ್ಟ 2-3 ಗಂಟೆಗಳ ನಂತರ ಪೊಲೀಸರು ಶಾಲೆಗೆ ಬಂದಿರುತ್ತಾರೆ. ಸುಮಾರು 3-4 ಜನ ಪೊಲೀಸರು ಸ್ಥಳಕ್ಕೆ ಬಂದರು. ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಪೊಲೀಸರು ಸ್ಥಳಕ್ಕೆ ಬಂದಾಗ ಸ್ಥಳಿಕರು ಯಾರೂ ಬಂದಿರಲಿಲ್ಲ. ಆಗ ನಾನು, ನಮ್ಮ ಶಿಕ್ಷಕರು ಮತ್ತು ಅಡುಗೆಯವರನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಸಾಕ್ಷಿ ಸ್ವತಃ ಪೊಲೀಸರು ಬಂದ ನಂತರ ಸ್ಥಳಿಕರು ಶಾಲೆಯ ಕಾಂಪೌಂಡ್ ಒಳಗೆ ಯಾರೂ ಬರಲಿಲ್ಲ, ದೂರದಲ್ಲಿ ನಿಂತು ನೋಡಿ ಹೋಗುತ್ತಿದ್ದರು. ಪೊಲೀಸರು ಸ್ಥಳದಲ್ಲಿ ಬರೆದುಕೊಂಡಿರುತ್ತಾರೆ. ಸದರಿ ಬರವಣಿಗೆಯಲ್ಲಿ ನಾನು ಮತ್ತು ನಮ್ಮ ಅಡುಗೆಯವರು ಮಾತ್ರ ಸಹಿ ಮಾಡಿರುತ್ತೇವೆ.

ಸದರಿ ಬರವಣಿಗೆಯನ್ನು ಮಧ್ಯಾಹ್ನ ಸುಮಾರು 1.00 ರಿಂದ 1.30 ಗಂಟೆ ಸಮಯದಲ್ಲಿ ಬರೆದಿರುತ್ತಾರೆ. ನನ್ನ ಸಮಕ್ಷಮ ಬೀಗವನ್ನು ಮಾತ್ರ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸದರಿ ಬೀಗದ ಬಿಲ್ಲು ಇದೆ. ಸದರಿ ಬೀಗದ ಬಿಲ್ಲನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ. ಬೀಗವನ್ನು ಪ್ಲಾಸ್ಟಿಕ್ ಕವರ್ ನಲ್ಲಿ ಹಾಕಿಕೊಂಡಿದ್ದರು. ಸಾಕ್ಷಿ ಸ್ವತಃ ಬಟ್ಟೆ ಕವರ್ ಗೆ ಬೀಗವನ್ನು ಹಾಕಿಕೊಂಡರು ಎಂದು ನುಡಿಯುತ್ತಾರೆ. ನಾನು ಬಟ್ಟೆ ಕವರ್ ಗೆ ಸಹಿಯನ್ನು ಮಾಡಿಲ್ಲ. ಬೀಗದ ಕಂಪನಿಯ ಹೆಸರು ಗೊತ್ತಿಲ್ಲ. ಪೊಲೀಸರು ಆ ದಿನ ಸ್ಥಳಕ್ಕೆ ಬಂದಿರಲಿಲ್ಲ, ಮಹಜರ್ ಕ್ರಮ ಜರುಗಿಸಿಲ್ಲ, ಬೀಗವನ್ನು ಅಮನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಬೀಗದ ಕೀ ಯನ್ನು ವಶಪಡಿಸಿಕೊಂಡಿಲ್ಲ. ಮು.ಮಾ.1 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ.

7. ನಾನು ಪುನಃ ದಿಃ01/02/2020 ರಂದು ಪೊಲೀಸ್ ಠಾಣೆಗೆ ಹೋಗಿದ್ದೆ. ಪೊಲೀಸರು ನನಗೆ ನೋಟೀಸು ಕೊಟ್ಟಿರಲಿಲ್ಲ, ಆದರೆ ಮೌಖಿಕವಾಗಿ ಕರೆದಿದ್ದರು. ಪೊಲೀಸ್ ಠಾಣೆಯಲ್ಲಿ ನನಗೆ ಆರೋಪಿತನ್ನು ತೋರಿಸಿದರು. ನಾನು ಈ ಮೊದಲು ಆರೋಪಿತನನ್ನು ಪೊಲೀಸ್ ಠಾಣೆಯಲ್ಲಿ ಬಿಟ್ಟರೆ ಬೇರೆ ಎಲ್ಲೂ ನೋಡಿರಲಿಲ್ಲ. ಪೊಲೀಸರು ಆರೋಪಿತನ್ನು ತೋರಿಸಿಕೊಟ್ಟ ನಂತರ ಆರೋಪಿತ ಈತನೇ ಎಂದು ಗೊತ್ತಾಯಿತು. ನನಗೆ ಆರೋಪಿತನ ಹೆಸರು, ವಿಳಾಸ ಮತ್ತು ಕೆಲಸದ ಬಗ್ಗೆ ತಿಳಿಸಲಿಲ್ಲ. ಆ ದಿನ ನನ್ನ ಹೇಳಿಕೆಯನ್ನು ಪಡೆದುಕೊಂಡರು, ಆದರೆ ಅದರಲ್ಲಿ ಏನು ಬರೆದರು ಎಂದು ಗೊತ್ತಿಲ್ಲ. ಠಾಣೆಯಲ್ಲಿ ಅಮಾನತ್ತು ಮಹಜರ್ ಕ್ರಮ ಜರುಗಿಸಿಲ್ಲ. ಇಂದು ನ್ಯಾಯಾಲಯದಲ್ಲಿ ಅಕ್ಕಿ ಮೂಟೆ ಮತ್ತು ಹಾಲಿನ ಪುಡಿಯ ಪ್ಯಾಕೇಟ್ ಇಲ್ಲ. ನಮ್ಮ ದಾಸ್ತಾನಿನಲ್ಲಿನ ಅಂಕಿ ಅಂಶಗಳನ್ನು ಸರಿಪಡಿಸಲು ಈ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ಆರೋಪಿತನ್ನು ನನಗೆ ತೋರಿಸಲಿಲ್ಲ ಎಂದರೆ ಸರಿಯಲ್ಲ. ಆರೋಪಿತನಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೇ ನಮ್ಮ ಶಾಲೆಯಲ್ಲಿ ಕಳ್ಳತನ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ, ಆದರೆ ಪೊಲೀಸರು ತೋರಿಸಿದ ಮೇರೆಗೆ

ಗೊತ್ತಾಯಿತು. ನಾನು ಮತ್ತು ಪೊಲೀಸರು ಶಾಮೀಲಾಗಿ ಆರೋಪಿತನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಪಿರಿಯಾಪಟ್ಟಣ.